ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

**ಸಿ.ಸಿ. ಸಂಖ್ಯೆ 656/2022**

ಚಾಸಾಃ 1 ಫ್ರಾಸಾಃ1

| | | |
|---|---|---|
| ಹೆಸರು | : | ರಾಮಯ್ಯ |
| ಗಂಡನ/ತಂದೆಯ ಹೆಸರು | : | ಹೊನ್ನೇಗೌಡ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಬ್ಯಾಡರಹಳ್ಳಿ ಗ್ರಾಮ. |

ದಿನಾಂಕ **19.11.2024** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

*2* ವರೆ ವರ್ಷಗಳ ಹಿಂದೆ ನನ್ನ ಮಗ ಹೊನ್ನಯ್ಯರವರು ಸ್ಕೂಟರ್ ನಲ್ಲಿ ಹಲಸಿನಕಾಯಿ ತೆಗೆದುಕೊಂಡು ಚನ್ನಪಟ್ಟಣ ಆರ್ ಎಂ ಸಿ ಗೆ ಹೋಗುವ ಸಲುವಾಗಿ ಬೆಳಗ್ಗೆ ***5.30*** ಗಂಟೆಯ ಸಮಯಕ್ಕೆ ಮನೆಯಿಂದ ಹೊರಟಿರುತ್ತಾರೆ. ಮಾಕಳಿ ಗ್ರಾಮದ ರಮೇಶ್ ಎನ್ನುವವರು ಸುಮಾರು ***6.00*** ಗಂಟೆಯ ಸಮಯದಲ್ಲಿ ನನಗೆ ದೂರವಾಣಿ ಕರೆ ಮಾಡಿ ಮಾಕಳಿ ಕೋಟೆ ಹೊಲ ಮಧ್ಯೆ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಬಂದಾಗ ನನ್ನ ಮಗನ ತಲೆ ಹೊಡೆದು ರಕ್ತಗಾಯವಾಗಿದ್ದು, ಮಾತುಕತೆ ನಿಂತು ಹೋಗಿತ್ತು. ನಾನು ಸ್ಥಳದಲ್ಲಿದ್ದ ರಮೇಶ್ ರವರನ್ನು ವಿಚಾರ ಮಾಡಿದಾಗ ಕೋಟೆ ಹೊಲ ದೊಡ್ಡಿ ಗ್ರಾಮದಿಂದ ಮೋಟಾರ್ ಸೈಕಲ್ ಅನ್ನು ಅದರ ಸವಾರ ಸ್ಪೀಡ್ ಆಗಿ ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿರುತ್ತಾನೆಂದು ತಿಳಿಸಿರುತ್ತಾರೆ. ನಂತರ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಚನ್ನಪಟ್ಟಣಕ್ಕೆ ಚಿಕಿತ್ಸೆಗೆ ಸೇರಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬಿ ಜಿ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಅಲ್ಲಿಂದ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಕರೆದುಕೊಂಡು ಸೇರಿಸಿರುತ್ತೇವೆ, ಆದರೆ ನನ್ನ ಮಗ ಚಿಕಿತ್ಸೆ ಫಲಕಾರಿಯಾಗದೆ ರಾತ್ರಿ ***11.00*** ಗಂಟೆಯ ಸಮಯದಲ್ಲಿ ಮೃತ ಪಟ್ಟಿರುತ್ತಾನೆ. ಆರೋಪಿ ತಪ್ಪಿನಿಂದಲೇ ಅಪಘಾತವಾಗಿರುತ್ತದೆ. ಆ ದಿನ ನನ್ನ

ಮಗನ ಮೃತ ದೇಹ ತರುವುದು ವಿಳಂಬವಾಗಿದ್ದರಿಂದ ಮರುದಿನ ನಾನು ಎಂ ಕೆ ದೊಡ್ಡಿ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ. ನಾನು ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ದೂರನ್ನು ಗುರುತಿಸಿದ್ದು ಅದನ್ನು ನಿಪಿ-*1* ಎಂದು ಗುರುತಿಸಲಾಯಿತು. ಸಾಕ್ಷಿಯು ಅದರ ಮೇಲೆ ಇರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್ ಕೆ ವಕೀಲರಿಂದಃ</u>

ನಾನು ಘಟನಾ ಸ್ಥಳಕ್ಕೆ ಬೆಳಗ್ಗೆ 6.00 ಗಂಟೆಗೆ ಹೋಗಿರುತ್ತೇನೆ. ನಿಪಿ-1 ರಲ್ಲಿರುವ ವಿಚಾರ ಗೊತ್ತಿದೆ. ಅಪಘಾತ ಪಡಿಸಿದ ವಾಹನ ಸಂಖ್ಯೆ ಗೊತ್ತಿಲ್ಲ. ನನ್ನ ಮಗನನ್ನು ಆ್ಯಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತೇನೆ.ಆಗ ನನ್ನ ಭಾಮೈದ ನನ್ನ ಜೊತೆಯಲ್ಲಿದ್ದರು. ರಮೇಶ್ ರವರು ಅಪಘಾತದ ತಿಳಿಸಿದ ಬಗ್ಗೆ ಪೋಲಿಸರಿಗೆ ತಿಳಿಸಿರುತ್ತೇನೆ. ಅಪಘಾತವಾದ ಸ್ಥಳದಲ್ಲಿ ನನ್ನ ಮಗನನ್ನು ನೋಡಿರುತ್ತೇನೆ. ನಿಪಿ-1 ರಲ್ಲಿರುವ ವಿಚಾರ ಗೊತ್ತಿಲ್ಲ ಎಂದರೆ ಸುಳ್ಳು. ನನ್ನ ಮಗನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸುಳ್ಳು. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸುಳ್ಳು. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ನಿಜ. ಚಾಸಾ3 ರವರು ಅಪಘಾತವನ್ನು ನೋಡಿಲ್ಲ ಮತ್ತು ನನಗೆ ವಿಷಯವನ್ನು ತಿಳಿಸಿಲ್ಲ ಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.